ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಜಲ ಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಬರುವ ನಾಲ್ಕೂ ನಿಗಮಗಳ ಕಾಮಗಾರಿಗಳಲ್ಲಿನ ಐಟಂಗಳ ಮೂಲದರ (Basic cost without taxes) ಅಂದಾಜಿಸುವ ಕುರಿತು.

****

**ಪ್ರಸ್ತಾವನೆ:-**

ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:04/10/2019 ರಂದು ಜರುಗಿದ ಸಭೆಯಲ್ಲಿ ದಿನಾಂಕ:01/07/2017 ರಿಂದ ಸರಕು ಮತ್ತು ಸೇವಾ ತೆರಿಗೆ (ಜಿ.ಎಸ್.ಟಿ) ವ್ಯವಸ್ಥೆಯನ್ನು ಕೇಂದ್ರ ಸರ್ಕಾರವು ಜಾರಿಗೊಳಿಸಿದ್ದು, ತದನಂತರ ಸಲ್ಲಿಸಲಾಗುವ ಕಾಮಗಾರಿಗಳ ಬಿಲ್ಲುಗಳಿಗೆ ಸದರಿ ಜಿ.ಎಸ್.ಟಿ ಕಾಯ್ದೆಯನ್ವಯ ತೆರಿಗೆ ವಿಧಿಸಬೇಕಾಗಿರುವ ಕುರಿತು ಚರ್ಚಿಸಲಾಗಿದೆ.

ದಿನಾಂಕ:01/07/2017ರಲ್ಲಿದ್ದಂತಹ ಚಾಲ್ತಿ ಕಾಮಗಾರಿಗಳು ಆಯಾ ವರ್ಷದ ಎಸ್.ಆರ್. ದರಗಳನ್ವಯ ಹಾಗೂ 2017-18ರಲ್ಲಿ ಕರೆದ ಹೊಸ ಟೆಂಡರ್‌ಗಳು 2016-17ನೇ ಸಾಲಿನ ಎಸ್.ಆರ್. ದರಗಳನ್ವಯ ಜಲಸಂಪನ್ಮೂಲ ಇಲಾಖೆಯಡಿ ಬರುವ ನಿಗಮಗಳು ಗುತ್ತಿಗೆಗಳನ್ನು ವಹಿಸಿರುತ್ತದೆ. ಇದರ ಮೇಲೆ ಉಂಟಾಗುವ ಜಿ.ಎಸ್.ಟಿ. ಪರಿಣಾಮ ಇನ್ನು ಲೆಕ್ಕ ಹಾಕಿರುವುದಿಲ್ಲ. ಅಂದರೆ ಹಳೇ ತೆರಿಗೆಗಳನ್ನು (Vat, Sales Tax, Excise duty, Entry Tax) ಹೊರತುಪಡಿಸಿದ ಮೂಲ ದರಗಳನ್ನು ಲೆಕ್ಕ ಹಾಕಬೇಕಾಗಿದೆ. ಸದರಿ ಮೂಲ ದರಗಳನ್ನು ಗುತ್ತಿಗೆಗಳಿಗೆ ಅಳವಡಿಸಿ, 12% ಜಿ.ಎಸ್.ಟಿ.ಯನ್ನು ಮೂಲ ದರಕ್ಕೆ ಲೆಕ್ಕಿಸಿ ಹಾಗೂ Input Tax Credit ಲಾಭವನ್ನು ಕಡಿತ ಮಾಡಿ ಗುತ್ತಿಗೆ ಮೊತ್ತವನ್ನು ನಿರ್ಧರಿಸಬೇಕಾಗಿರುತ್ತದೆ ಹಾಗೂ Input Tax Credit ಸಹ ಲೆಕ್ಕ ಹಾಕಬೇಕಾಗಿರುತ್ತದೆ. ಎಸ್.ಆರ್.ನಲ್ಲಿ ತೆರಿಗೆ ವಿಂಗಡಣೆ ಇಲ್ಲದಿರುವುದರಿಂದ ಸದರಿ ಪ್ರಕ್ರಿಯೆಯನ್ನು ಇನ್ನು ನಿಗಮಗಳು ಕೈಗೊಂಡಿರುವುದಿಲ್ಲ. ಇದರಿಂದ ನಿಗಮಗಳಿಗೆ ಗುತ್ತಿಗೆ ಮೊತ್ತದಲ್ಲಿ ಉಳಿತಾಯವಾಗಬಹುದೆಂದು ಅಂದಾಜಿಸಲಾಗಿರುತ್ತದೆ.

ಜಲಸಂಪನ್ಮೂಲ ಇಲಾಖೆ, ಪಿ.ಡಬ್ಲ್ಯೂ.ಡಿ. ಇಲಾಖೆ ಹಾಗೂ ಇನ್ನಿತರೆ ಸಂಬಂಧಪಟ್ಟ ಇಲಾಖೆಗಳ ಎಸ್.ಆರ್.ಗಳ ದರಗಳನ್ವಯ ಕೆಲವೊಂದು ಐಟಂಗಳ ದರಗಳನ್ನು ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸುವಾಗ ಅಳವಡಿಸಿದ್ದು, ಸದರಿ ಐಟಂಗಳ ಮೂಲದರ (Basic cost without taxes) (ಅಂದರೆ ತೆರಿಗೆ ಹೊರತುಪಡಿಸಿರುವುದರ) ಗಳ ಅವಶ್ಯಕವಿರುತ್ತದೆ. ಈ ಹಿನ್ನೆಲೆಯಲ್ಲಿ ಕಾಮಗಾರಿಗಳಲ್ಲಿನ ಐಟಂಗಳ ಮೂಲದರ ಅಂದಾಜಿಸಲು ಸಮಿತಿಯನ್ನು ರಚಿಸುವ ಕುರಿತು ದಿನಾಂಕ:04/10/2019ರಂದು ಜರುಗಿದ ಸಭೆಯಲ್ಲಿ ನಿರ್ಧರಿಸಲಾಗಿದೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 267 ಕೆಬಿಎನ್ 2018(ಭಾಗ-1), ಬೆಂಗಳೂರು, ದಿನಾಂಕ:31/10/2019.**

ಜಲ ಸಂಪನ್ಮೂಲ ಇಲಾಖೆಯ ಅಡಿಯಲ್ಲಿ ಬರುವ ನಾಲ್ಕೂ ನಿಗಮಗಳ ಅಡಿಯಲ್ಲಿ ದಿನಾಂಕ:01/07/2017ರಲ್ಲಿದ್ದಂತಹ ಚಾಲ್ತಿ ಕಾಮಗಾರಿಗಳಲ್ಲಿನ ಐಟಂಗಳ ಮೂಲದರ (Basic cost without taxes) (ಅಂದರೆ ತೆರಿಗೆ ಹೊರತುಪಡಿಸಿರುವುದರ) ಅಂದಾಜಿಸಲು ಈ ಕೆಳಕಂಡ ಸದಸ್ಯರುಗಳನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ.

1. ಮುಖ್ಯ ಇಂಜಿನಿಯರ್ – ಅಧ್ಯಕ್ಷರು
   ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ.

2. ಪ್ರಧಾನ ವ್ಯವಸ್ಥಾಪಕರು (ಆರ್ಥಿಕ) — ಸದಸ್ಯರು
ಕಾವೇರಿ ನೀರಾವರಿ ನಿಗಮ ನಿಯಮಿತ.

3. ಪ್ರಧಾನ ವ್ಯವಸ್ಥಾಪಕರು (ಆರ್ಥಿಕ) — ಸದಸ್ಯರು
ಕರ್ನಾಟಕ ನೀರಾವರಿ ನಿಗಮ ನಿಯಮಿತ

4. ಪ್ರಧಾನ ವ್ಯವಸ್ಥಾಪಕರು (ಆರ್ಥಿಕ) — ಸದಸ್ಯರು
ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ.

5. ಶ್ರೀ ಆರ್.ಎಸ್. ಪಶುಪತಿ, — ವಿಶೇಷ ಆಹ್ವಾನಿತರು
ಆರ್ಥಿಕ ಸಲಹೆಗಾರರು,
ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

6. ಪ್ರಧಾನ ವ್ಯವಸ್ಥಾಪಕರು (ಆರ್ಥಿಕ), — ಸದಸ್ಯ ಕಾರ್ಯದರ್ಶಿ.
ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ.

ಮೇಲ್ಕಂಡ ಸಮಿತಿಯು ಕಾಮಗಾರಿಗಳಲ್ಲಿನ ಐಟಂಗಳ ಮೂಲದರ (Basic cost without taxes) ಗಳನ್ನು ಸಂಗ್ರಹಿಸಿ 15 ದಿನಗಳೊಳಗಾಗಿ ವರದಿ ಸಲ್ಲಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ-5)
ಜಲ ಸಂಪನ್ಮೂಲ ಇಲಾಖೆ

ಪ್ರತಿಯನ್ನು:

1. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ9 ನಿಗಮ ನಿಯಮಿತ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ. ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು,
7. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
8. ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಸಹಾಯಕರು.
9. ಶಾಖಾ ರಕ್ಷಕ ಕಡತ/ ಹೆಚ್ಚಿನ ಪ್ರತಿಗಳು.